ರುಚಿಕರವಾದ ಉಪಹಾರ
ಸಿಹಿ–ಖಾರ ತಿಂಡಿಗಳು
ನ್ಯೂ ಕೋರ್ಟ್ ರೆಸ್ಟೋರೆಂಟ್
ಹೊಸ ಬಸ್‌ಸ್ಟ್ಯಾಂಡ್ ಬಳಿ
ಕುಂದಾಪುರ ಫೋ : 232878

www.kundaprabha.com e-mail : kundaprabha@gmail.com

# ಕುಂದಪ್ರಭ
ವಾರಪತ್ರಿಕೆ

ಸ್ಥಾಪನೆ : 1948
6 ದಶಕಗಳ ವಿಶ್ವಾಸನೀಯ ಸೇವೆಯಲ್ಲಿ
ಶೇಟ್ ಜ್ಯುವೆಲ್ಲರ್ಸ್
ಶಂಕರ್‌ಶೇಟ್ ಬಿಲ್ಡಿಂಗ್
ಮುಖ್ಯರಸ್ತೆ, ಕುಂದಾಪುರ
ಫೋನ್: 230242

*ಸಂಪುಟ :25 *ಸಂಚಿಕೆ :26* Udp/1263/2015-17 * R.NO. 50495/91 * ತಾರೀಕು 14–07–2015 * ರೂ 5/– * ವಾರ್ಷಿಕ ಚಂದಾ : 300/– ಅಂಚೆಯಲ್ಲಿ : 350/

ವೆಸ್ಟರ್ನ್ ಇನ್ಸ್ಟಿಟ್ಯೂಟ್‌ನಿಂದ ಅತ್ಯಂತ ಬೇಡಿಕೆಯಿರುವ ಜಾಬ್ ಓರಿಯೆಂಟೆಡ್ ಡಿಪ್ಲೋಮಾ / ಡಿಗ್ರಿ
Recognition & Academic Collaboration
Recognised by govt of India As V.T.P
Karnataka State Open University
Approved Education provider of Franklin University USA
Collaborative training provider of University of Wisconsin USA
3 ವರ್ಷದ ಡಿಗ್ರಿ ಅರ್ಹತೆ : 10 + 2
• ಬ್ಯಾಚುಲರ್ ಇನ್ HSE (ಸೇಫ್ಟಿ ಮ್ಯಾನೇಜರ್)
• ಬ್ಯಾಚುಲರ್ ಇನ್ ಹೋಟೇಲ್ ಮ್ಯಾನೇಜ್‌ಮೆಂಟ್
• ಬ್ಯಾಚುಲರ್ ಇನ್ ಬಿಸಿನೆಸ್ ಮ್ಯಾನೇಜ್‌ಮೆಂಟ್
• ಬ್ಯಾಚುಲರ್ ಇನ್ ಕಂಪ್ಯೂಟರ್ ಹಾರ್ಡ್‌ವೇರ್ & ಸಾಫ್ಟ್‌ವೇರ್
MBA ಇನ್ ಪ್ರೊಜೆಕ್ಟ್ ಮ್ಯಾನೇಜ್‌ಮೆಂಟ್, HR, ಫೈನಾನ್ಸ್
1 ವರ್ಷದ ಡಿಪ್ಲೋಮಾ ಅರ್ಹತೆ : 10ನೇ ಪಾಸ್, ಪಿಯುಸಿ ಪಾಸ್ / ಫೈಲ್
• ಡಿಪ್ಲೋಮಾ ಇನ್ HSE (ಸೇಫ್ಟಿ ಆಫೀಸರ್)
• ಡಿಪ್ಲೋಮಾ ಇನ್ ಫಯರ್ & ಸೇಫ್ಟಿ ಇಂಜಿನಿಯರಿಂಗ್
• ಡಿಪ್ಲೋಮಾ ಇನ್ ಬಿಸಿನೆಸ್ ಎಡ್ಮಿನಿಸ್ಟ್ರೇಷನ್ & ಹೆಚ್.ಆರ್.ಎಂ.
• ಡಿಪ್ಲೋಮಾ ಇನ್ ಸಿವಿಲ್ ಇಂಜಿನಿಯರಿಂಗ್
• ಡಿಪ್ಲೋಮಾ ಇನ್ ಇಲೆಕ್ಟ್ರಿಕಲ್ & ಇಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್
• ಡಿಪ್ಲೋಮಾ ಇನ್ ಕಂಪ್ಯೂಟರ್ ಹಾರ್ಡ್‌ವೇರ್ & ಸಾಫ್ಟ್‌ವೇರ್
• ಡಿಪ್ಲೋಮಾ ಇನ್ ಮೆಕಟ್ರಾನಿಕ್ಸ್ ಇಂಜಿನಿಯರಿಂಗ್
• ಡಿಪ್ಲೋಮಾ ಇನ್ ಹೋಟೆಲ್ & ಹಾಸ್ಪಿಟಾಲಿಟಿ
• ಡಿಪ್ಲೋಮಾ ಇನ್ ಆಟೋಮೊಬೈಲ್ ಇಂಜಿನಿಯರಿಂಗ್
• ಡಿಪ್ಲೋಮಾ ಇನ್ ಮೆರೈನ್ ಇಂಜಿನಿಯರಿಂಗ್
Join before 10th July & get Free Diploma in Computer & English speaking.
For fastrack courses contact :
WESTERN Institute of Technology
• Opp. Circuit House, Kadri Hills, Mangalore. Ph: 0824-6536509, 9611055883
• 1st floor, Raaj Towers, City Bus Stand, Udupi. Ph: 0820-2528726, 9686695206
Website : www.westerniot.com

# ರಾಷ್ಟ್ರೀಯತೆ–ಬದ್ಧತೆ ಅರಿವು ಎಲ್ಲರಲ್ಲೂ ಇರಬೇಕು

ರಾಷ್ಟ್ರೀಯತೆಯ ಬಗ್ಗೆ ಬದ್ಧತೆ ಯುವ ಜನಾಂಗದಲ್ಲಿ ಮೂಡಿಸಲು ಮುಖ್ಯವಾಗಿ ಪ್ರಜಾಪ್ರಭುತ್ವದ ಪ್ರಮುಖ ಅಂಗಗಳಾದ ನ್ಯಾಯಾಂಗ, ಕಾರ್ಯಾಂಗ, ಶಾಸಕಾಂಗಗಳ ಬಗ್ಗೆ ಅವರಿಗೆ ಅರಿವು ಇರಬೇಕು. ವಾತಾವರಣಕ್ಕೆ ಹೊಂದಿಕೊಂಡು ಬದಲಾಗುತ್ತಿರುವ ಕಾನೂನು ನಿಯಮಗಳ ಬಗ್ಗೆಯೂ ಎಲ್ಲಾ ನಾಗರಿಕರಿಗೆ ಅರಿವು ಇರಬೇಕು. ಜನ ಜಾಗೃತಿಗೊಂಡರೆ ರಾಷ್ಟ್ರೀಯತೆಯ ತಳಹದಿ ಗಟ್ಟಿಯಾಗುತ್ತದೆ. ಈ ನಿಟ್ಟಿನಲ್ಲಿ ಕುಂದಾಪುರದ ಕಲಾಕ್ಷೇತ್ರ ಆರಂಭಿಸಿದ ಪ್ರಯತ್ನ ಶ್ಲಾಘನೀಯವಾದುದು ಎಂದು ಎಲ್ಲಾ ಅತಿಥಿಗಳು ಅಭಿಪ್ರಾಯಪಟ್ಟರು. ಈ ಒಂದು ಗಂಭೀರ ಚಿಂತನೆಯ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳ ಭಾಗವಹಿಸುವಿಕೆ ಇನ್ನಷ್ಟು ಇದ್ದರೆ ಸಾರ್ಥಕವಾಗುತ್ತಿತ್ತು ಎಂಬ ಅಭಿಪ್ರಾಯವೂ ಮೂಡಿತು.




ಕಲಾಕ್ಷೇತ್ರ ಕುಂದಾಪುರ ಇವರ ಆಶ್ರಯದಲ್ಲಿ ಕುಂದಾಪುರದ ಆರ್.ಎನ್.ಶೆಟ್ಟಿ ಕಲ್ಯಾಣ ಭವನದಲ್ಲಿ ರಾಷ್ಟ್ರೀಯತೆ ಮತ್ತು ಬದ್ಧತೆ, ವಿಚಾರ ಸಂಕಿರಣ ಹಾಗೂ ಸಂವಾದ ಕಾರ್ಯಕ್ರಮ ಜರಗಿತು.

ಈ ವಿಚಾರಸಂಕಿರಣವನ್ನು ಉದಯ ವಾಹಿನಿಯ ದೀಪಕ್ ತಿಮ್ಮಯ ಅವರು ಉದ್ಘಾಟಿಸಿ, ರಾಜಕೀಯ ಬೌದ್ಧಿಕತೆಗೆ ಹಾಗೂ ವಿಚಾರ ಮಂಡನೆಗೆ ಕುಂದಾಪುರ ಒಂದು ವೇದಿಕೆಯಾಗುವುದರೊಂದಿಗೆ ಕರ್ನಾಟಕದ ರಾಜಕೀಯ ಚಿಂತನಾಕೇಂದ್ರವಾಗಿ ಮೂಡಿಬರಬೇಕು. ಈ ನಿಟ್ಟಿನಲ್ಲಿ ಈ ವಿಚಾರಸಂಕಿರಣ ಒಂದು ಅಡಿಪಾಯವಾಗಲಿ ಎಂದರು.

ಈ ವಿಚಾರ ಸಂಕಿರಣದಲ್ಲಿ ಕಾರ್ಯಾಂಗ, ಶಾಸಕಾಂಗ, ನ್ಯಾಯಾಂಗದ ಕುರಿತು ಮೂರು ಗೋಷ್ಠಿಗಳನ್ನು ನಡೆಸಲಾಗಿದ್ದು ಅನಂತರ ಸಂವಾದ ನಡೆಯಿತು.

**ಕಾನೂನು ನಿಂತ ನೀರಲ್ಲ ಬದಲಾವಣೆಗಳು ಆಗಲೇ ಬೇಕು ಹೆಗ್ಡೆ :**

ಮೊದಲನೆಯದಾಗಿ ನ್ಯಾಯಾಂಗದ ಕುರಿತು ಉಪನ್ಯಾಸ ಮಾಡಿದ ಮಾಜಿ ಸಂಸದ ಕೆ.ಜಯಪ್ರಕಾಶ್ ಹೆಗ್ಡೆ ವಿಷಯ ಮಂಡನೆ ಮಾಡಿ ಇಂದು ಪ್ರತಿಯೊಬ್ಬರು ತಮ್ಮ ಹಕ್ಕುಗಳ ಬಗ್ಗೆ ಚರ್ಚೆ ನಡೆಸುತ್ತಾರೆ ವಿನಾ ಕರ್ತವ್ಯದ ಬಗ್ಗೆ ಅಲ್ಲ, ಶಾಸಕರು ಗ್ರಾ.ಪಂ. ಜಿ.ಪಂ ಗಳ ಸಭೆಗಳಲ್ಲಿ ಭಾಗವಹಿಸುವ ಅರ್ಹತೆಯನ್ನು ಪಡೆಯುವ ಮೂಲಕ ಈ ಸ್ತರಗಳಲ್ಲಿ ಹಸ್ತಕ್ಷೇಪವನ್ನು ನಡೆಸುವ ಸಾಧ್ಯತೆಗಳಿರುತ್ತವೆ.

( 12ನೇ ಪುಟಕ್ಕೆ)

AXIS BANK
Main Road, Near Abharana
Kundapura
Enjoy all modern Banking Facilities at your Doorstep
Now 24 Hours Cash Deposit Service Available.
For Free Personalized Service
Contact for BG/LC/Forex Transactions
Please Call
8095511181
08254-235601 /2 /3

# ಮನೆಗೆ ಬರುವ ಯುವತಿಯರಿಂದ ಬೆಸ್ತು ಬಿದ್ದೀರಿ ಜೋಕೆ !

ಯುವತಿಯೊಬ್ಬಳು ಕುಂದಾಪುರದ ಮನೆಯೊಂದಕ್ಕೆ "ಒನ್‌ಗ್ರಾಮ್" ಚಿನ್ನಾಭರಣಗಳೊಂದಿಗೆ ಬಂದಿದ್ದಳು. ಸಂಜೆ ಹೊತ್ತು ಮಾತನಾಡುತ್ತಾ ಕುಳಿತ ಮಹಿಳೆಯರಿಗೆ ಆಕೆಯಿಂದ ಏನಾದರೂ ಕೊಂಡು ಸಹಾಯ ಮಾಡುವ ಮನಸ್ಸು ಮೂಡಿತು. ಜುಮಕಿ, ಮುಂತಾದ ಸಣ್ಣ ಪುಟ್ಟ ಆಭರಣ ಕೊಂಡರು. ಐದು ನೂರು ರೂಗಳ ನೋಟುಗಳನ್ನು ಪಡೆದ ಯುವತಿ ಸಂತಸದಿಂದ ಎಂಬಂತೆ ಮುಖ ಅರಳಿಸಿ ತೆರಳಿದಳು. ಅಥವಾ ನಾನು ಈ ಮನೆಯವರನ್ನು ಬೆಪ್ಪು ಮಾಡಿದೆ ಎಂದು ನಕ್ಕಳೋ ? ಒಟ್ಟಾರೆ ವ್ಯವಹಾರ ಮಾಡಿ ಹೋದಳು.

> ಮನೆ ಮನೆಗೆ ಬರುವ ಅಪರಿಚಿತ ಮಹಿಳೆ, ಯುವತಿಯರ ಬಗ್ಗೆ ಬಹಳ ಎಚ್ಚರದಿಂದ ಇರುವುದು ಮುಖ್ಯ.

ಒಂದು ಗಂಟೆ ಕಳೆದಿರಬೇಕು. ಹುಡುಗನೊಬ್ಬನನ್ನು ಜೊತೆಗೆ ಕರೆದುಕೊಂಡೇ ಬಂದ ಯುವತಿಯ ಮುಖ ಚರ್ಯೆಯೇ ಬದಲಾಗಿತ್ತು. " ಏನಮ್ಮಾ, ನಾವು ಪಾಪದವರು ಅಂತ ಹೀಗೆ ಮೋಸ ಮಾಡುವುದಾ, ಖೋಟಾ ನೋಟು ಕೊಟ್ಟು ನಮ್ಮನ್ನು ಮೋಸ ಮಾಡುವುದಾ.... ಎಂದು ಸುರುವಾದ ಮಾತಿನ ಸುರಿಮಳೆ ಬೇರೆ ಹಣ ಕೊಡದಿದ್ದರೆ ಪೋಲಿಸರಿಗೆ ತಿಳಿಸುತ್ತೇನೆ' ಎನ್ನುವ ತನಕ ಹೋಯಿತು. ಹೆಂಗಸರಿಗೆ ಕಸಿವಿಸಿ.

ಮನೆಯವರ ಅದೃಷ್ಟಕ್ಕೆ ಮನೆಯ ಯಜಮಾನರ ವಾಹನ ಕಂಪೌಂಡ್ ಪ್ರವೇಶ ಮಾಡಿತು. ನಡೆದದ್ದನ್ನೆಲ್ಲ ಹೇಳಿದರು. ಯಜಮಾನರು ತಾಳ್ಮೆ ಕಳೆದುಕೊಳ್ಳಲಿಲ್ಲ. "ಹೌದಾ ಮಾರಾಯ್ತಿ, ನೀನು ಹೇಳಿದ ಹಾಗೆ ಮಾಡುವ, ನಾನು ಪೋಲಿಸ್ ಸ್ಟೇಷನ್‌ಗೆ ಬರ್ತೇನೆ, ನೀನೂ ಆ ನೋಟು ಹಿಡಿದುಕೊಂಡು ಬಾ. ಪೋಲಿಸರು ನಮ್ಮ ಮನೆಯವರದ್ದೇ ತಪ್ಪು ಎಂದು ಹೇಳಿದರೆ ನಿನಗೆ ಹೆಚ್ಚು ಹಣ ಸಿಗುತ್ತದೆ. ನಿನ್ನದೇ ತಪ್ಪು ಅಂತ ತಿಳಿದರೆ ಕೇಸ್ ಹಾಕ್ತಾರೆ "ಎಂದರು".

ಕ್ಷಣ ಮಾತ್ರದಲ್ಲಿ ಯುವತಿ ಹುಡುಗನೊಂದಿಗೆ ನಾಪತ್ತೆ. "ಹುಬ್ಬಳ್ಳಿ" ಕಡೆಯವಳು ಎಂದು ಹೇಳಿಕೊಳ್ಳುವ ಈ ಯುವತಿ ಖೋಟಾ ನೋಟುಗಳನ್ನು ಚಲಾವಣೆ ಮಾಡುವ ತಂಡದವಳೋ, ಆಯಾ ಮನೆಯ ಜನರನ್ನು ನೋಡಿ ಮೋಸದ ತಂತ್ರ ಹೂಡುವವಳೋ ಎಂದು ಸ್ಪಷ್ಟವಾಗುವುದಿಲ್ಲವಾದರೂ, ಖೋಟಾ ನೋಟುಗಳನ್ನು ಈ ಮಂದಿಯ ಮೂಲಕ ಚಲಾವಣೆ ಮಾಡುವ ಜಾಲ ಇರಬಹುದು ಎಂಬ ಸಂಶಯ ಮೂಡುತ್ತದೆ.

ಈ ರೀತಿ ಒನ್‌ಗ್ರಾಮ್ ಚಿನ್ನಾಭರಣದ ಮಾರಾಟದ ಮೂಲಕ ಜನರಿಗೆ ಮಂಕುಬೂದಿ ಎರಚಿರುವ ಘಟನೆ ಗ್ರಾಮೀಣ ಪ್ರದೇಶದ ಕೆಲವು ಕಡೆ ನಡೆದ ಸುದ್ಧಿ ಇದೆ. ತಾವು ಮೋಸ ಹೋದೆವು ಎಂದು ಹೇಳಲಿಚ್ಛಿಸದೇ ಹಣ ಕಳೆದುಕೊಂಡು ಸುಮ್ಮನಿದ್ದವರು ಬಹಳ ಮಂದಿ. ಅಪರಿಚಿತರು ಮನೆಗೆ ಬಂದಾಗ ನಿಮ್ಮ, ಆಸೆ, ಆತುರ ನಿಯಂತ್ರಣದಲ್ಲಿಡಿ ಎಂದು ಮಹಿಳೆಯರಿಗೆ ಜಾಗ್ರತೆ ಹೇಳುತ್ತಾ ಇರಬೇಕಾಗುತ್ತದೆ.

Saraswathi Group Of Institutes
1st Floor, Sri Ganesh Prasad, West Block Road, Kundapura- 576201
Ph: 9916034605
Free Guidance and Entrance Exam for 1st P.U (Science) Students on
JEE/AIPMT/CET
Date: 5th and 12th July Time: 9.30 am to 12.00 p.m
Venue: Saraswathi Group of Institutes
For Registration Visit
www.sginstitutes.com
OR
Call us @ 9916034605/9141138705 Mail us @ sginstitutes@gmail.com
Follow us on
FB: www.facebook.com/sginstitutes Twitter : www.twitter.com/sginstitutes